# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 650
ಸದಸ್ಯರ ಹೆಸರು : ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು)
ಉತ್ತರಿಸಬೇಕಾದ ದಿನಾಂಕ : 09-03-2026
ಉತ್ತರಿಸುವ ಸಚಿವರು : ಮಾನ್ಯ ಇಂಧನ ಸಚಿವರು

****

| | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ ಅಡಿಯಲ್ಲಿ ಬರುವ ಬೆಂಗಳೂರು ಮಹಾನಗರ ಪಾಲಿಕೆ (ಗ್ರೇಟರ್ ಬೆಂಗಳೂರು ಆಥಾರಿಟಿ) ಎಷ್ಟು ಉಪ ವಿಭಾಗಗಳಲ್ಲಿ ವಿಂಗಡಿಸಲಾಗಿರುತ್ತದೆ: | ಬೆವಿಕಂಪನಿ ಅಡಿಯಲ್ಲಿ ಬರುವ ಬೆಂಗಳೂರು ಮಹಾನಗರ ಪಾಲಿಕೆ (ಗ್ರೇಟರ್ ಬೆಂಗಳೂರು ಆಥಾರಿಟಿ) ಒಟ್ಟು 64 ಉಪವಿಭಾಗಗಳಾಗಿ ವಿಂಗಡಿಸಲಾಗಿರುತ್ತದೆ. |
| ಆ) | ಗ್ರೇಟರ್ ಬೆಂಗಳೂರು ಆಥಾರಿಟಿ ವ್ಯಾಪ್ತಿಯಲ್ಲಿ ಬೆಸ್ಕಾಂನ ಎಷ್ಟು ಎಚ್.ಡಿ ಮತ್ತು ಎಲ್.ಟಿ ಲೈನ್‌ಗಳು (ಮೇಲ್ಭಾಗದಲ್ಲಿ) ಹಾದು ಹೋಗಿರುತ್ತವೆ: ಮೇಲ್ಭಾಗದಲ್ಲಿ ಹಾದು ಹೋಗಿರುವ ಈ ಲೈನ್ ಗಳನ್ನು ಅಳವಡಿಸಿ ಎಷ್ಟು ವರ್ಷಗಳಾಗಿರುತ್ತದೆ: (ವಿವರಗಳನ್ನು ನೀಡುವುದು): | ಗ್ರೇಟರ್ ಬೆಂಗಳೂರು ಆಥಾರಿಟಿ ವ್ಯಾಪ್ತಿಯಲ್ಲಿ ಬೆವಿಕಂಪನಿಯಲ್ಲಿ ಪ್ರಸ್ತುತ 561.22rkm ಹೆಚ್.ಟಿ ಮತ್ತು 1530.91rkm ಎಲ್.ಟಿ ಲೈನ್ ಗಳು ಮೇಲ್ಭಾಗದಲ್ಲಿ ಹಾದು ಹೋಗಿರುತ್ತದೆ ಮತ್ತು ಮೇಲ್ಭಾಗದಲ್ಲಿ ಹಾದು ಹೋಗಿರುವ ಈ ಲೈನ್‌ಗಳನ್ನು ಅಳವಡಿಸಿ ಸುಮಾರು 25 ವರ್ಷಗಳಾಗಿರುತ್ತದೆ. |
| ಇ) | ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಗ್ರೇಟರ್ ಬೆಂಗಳೂರು ಆಥಾರಿಟಿ ವ್ಯಾಪ್ತಿಯಲ್ಲಿ ಮೇಲ್ಭಾಗದಲ್ಲಿ ಹಾದುಹೋಗಿರುವ ಎಚ್.ಡಿ ಮತ್ತು ಎಲ್.ಟಿ ಲೈನ್ ಗಳನ್ನು ಮಾರ್ಪಡಿಸಲು ಅಥವಾ ತೆಗೆಯಲು ಹಾಕಿಕೊಂಡಿರುವ ಕಾರ್ಯಯೋಜನೆಗಳು ಯಾವುವು: ಇಲ್ಲಿಯವರೆಗೆ ಎಷ್ಟು ಇಂತಹ ಲೈನ್ ಗಳನ್ನು ತೆಗೆಯಲಾಗಿರುತ್ತದೆ: | ಬೆವಿಕಂಪನಿಯು ಗ್ರೇಟರ್ ಬೆಂಗಳೂರು ಆಥಾರಿಟಿ ವ್ಯಾಪ್ತಿಯಲ್ಲಿ ಮೇಲ್ಭಾಗದಲ್ಲಿ ಹಾದುಹೋಗಿರುವ ಹೆಚ್.ಟಿ ಮತ್ತು ಎಲ್.ಟಿ ಮಾರ್ಗ ಗಳನ್ನು ಮಾರ್ಪಡಿಸಲು ಅಥವಾ ತೆಗೆಯಲು ಹಾಕಿಕೊಂಡಿರುವ ಕಾರ್ಯಯೋಜನೆಗಳು ಈ ಕೆಳಕಂಡಂತಿವೆ:<br>• ಬಂಡವಾಳ ಕಾಮಗಾರಿಗಳ (CAPEX) ಅಡಿಯಲ್ಲಿ ಬಹುತೇಕ ಹೆಚ್.ಟಿ (11kV) ಓವರ್ ಹೆಡ್ ಲೈನ್‌ಗಳನ್ನು ಭೂಗತ ಕೇಬಲ್ ಗಳನ್ನಾಗಿ ಹಾಗೂ ಎಲ್.ಟಿ ಓವರ್ ಹೆಡ್ ಲೈನ್ ಗಳನ್ನು ಎಲ್.ಟಿ-ಎ.ಬಿ. ಕೇಬಲ್ ಗಳನ್ನಾಗಿ ಪರಿವರ್ತಿಸಲಾಗಿದೆ.<br>• ಇಲ್ಲಿಯವರೆಗೂ, 8475.04rkm ಹೆಚ್.ಟಿ (11kV) ಓವರ್ ಹೆಡ್ ಲೈನ್‌ಗಳನ್ನು ಭೂಗತ ಕೇಬಲ್ ಗಳನ್ನಾಗಿ ಹಾಗೂ 6761.20rkm ಎಲ್.ಟಿ ಓವರ್ ಹೆಡ್ ಲೈನ್ ಗಳನ್ನು ಎಲ್.ಟಿ-ಎ.ಬಿ. ಕೇಬಲ್ ಗಳನ್ನಾಗಿ ಪರಿವರ್ತಿಸಲಾಗಿದೆ. |
| ಈ) | ಗ್ರೇಟರ್ ಬೆಂಗಳೂರು ಆಥಾರಿಟಿ ವ್ಯಾಪ್ತಿಯಲ್ಲಿ ಬೆಸ್ಕಾಂನ ವತಿಯಿಂದ ಮೇಲ್ಭಾಗದಲ್ಲಿ ಹಾದುಹೋಗಿರುವ ಎಚ್.ಡಿ ಮತ್ತು ಎಲ್.ಟಿ ಲೈನ್ ಗಳನ್ನು ತೆಗೆಯಲು ಬಾಕಿ ಇರುವ ಲೈನ್‌ಗಳ ಮಾಹಿತಿಯನ್ನು ಒದಗಿಸುವುದು: | ಗ್ರೇಟರ್ ಬೆಂಗಳೂರು ಆಥಾರಿಟಿ ವ್ಯಾಪ್ತಿಯಲ್ಲಿ ಬೆವಿಕಂಪನಿಯ ವತಿಯಿಂದ ಮೇಲ್ಭಾಗದಲ್ಲಿ ಹಾದು ಹೋಗಿರುವ 561.22 rkm ಹೆಚ್.ಟಿ ಮತ್ತು 1530.91rkm ಎಲ್.ಟಿ ಲೈನ್‌ಗಳನ್ನು ಭೂಗತ (UG)/ಎ.ಬಿ ಕೇಬಲ್ (AB) ಆಗಿ ಪರಿವರ್ತಿಸಲು ಬಾಕಿ ಇರುತ್ತದೆ. |

| | | |
|---|---|---|
| ಉ) | ಬೆಂಗಳೂರಿನ ಬೆಸ್ಕಾಂ ಉಪವಿಭಾಗ-18ರ ಅಡಿಯಲ್ಲಿ ಬರುವ ಚಿಕ್ಕ ಕಲ್ಲಸಂದ್ರು ವ್ಯಾಪ್ತಿಯಲ್ಲಿ ಎಷ್ಟು ಎಚ್.ಡಿ ಮತ್ತು ಎಲ್ ಟಿ ಲೈನ್‌ಗಳು ಹಾದುಹೋಗಿರುತ್ತವೆ: ಪ್ರಸ್ತುತ ಚಾಲ್ತಿಯಲ್ಲಿ ಇರುವ ಅಥವಾ ನಿಷ್ಕ್ರಿಯಗೊಂಡಿರುವ ಲೈನ್‌ಗಳ ಯಾವುವು? (ಪೂರ್ಣ ವಿವರಗಳನ್ನು ಒದಗಿಸುವುದು) | ಬೆಂಗಳೂರು ದಕ್ಷಿಣ ವೃತ್ತದ, ಜಯನಗರ ವಿಭಾಗದ, ಉಪವಿಭಾಗ ಎಸ್-18 ರಲ್ಲಿ ಬರುವ ಚಿಕ್ಕಕಲ್ಲಸಂದ್ರು ವ್ಯಾಪ್ತಿಯಲ್ಲಿ 102.49rkm ಹೆಚ್.ಟಿ ಮತ್ತು 96.26rkm ಎಲ್.ಟಿ ಲೈನ್‌ಗಳು ಹಾದು ಹೋಗಿರುತ್ತದೆ. ಪ್ರಸ್ತುತ ನಿಷ್ಕ್ರಿಯಗೊಂಡಿರುವ ಲೈನ್ ಗಳು ಇರುವುದಿಲ್ಲ. ವಿವರಗಳನ್ನು **ಅನುಬಂಧದಲ್ಲಿ** ಲಗತ್ತಿಸಲಾಗಿದೆ. |

ಸಂಖ್ಯೆ: ಎನರ್ಜಿ 47 ಇಬಿಎಸ್ 2026

(ಕೆ.ಜೆ.ಜಾರ್ಜ್)
ಇಂಧನ ಸಚಿವರು

ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರಮೇಶ್ ಬಾಬು (ನಾಮನಿರ್ದೇಶಿತರು) ಇವರ
ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 650 ಕ್ಕೆ ಅನುಬಂಧ

ಬೆಂಗಳೂರು ದಕ್ಷಿಣ ವೃತ್ತದ, ಜಯನಗರ ವಿಭಾಗದ, ಉಪವಿಭಾಗ ಎಸ್-18 ರಲ್ಲಿ ಬರುವ ಚಿಕ್ಕಕಲ್ಲಸಂದ್ರ ವ್ಯಾಪ್ತಿಯಲ್ಲಿ ಹೆಚ್.ಟಿ ಮತ್ತು ಎಲ್.ಟಿ ಲೈನ್‌ಗಳು ಹಾದು ಹೋಗಿರುವ ವಿವರಗಳು

| ಕ್ರ.ಸಂ | ವಿಭಾಗ | ಉಪವಿಭಾಗ | ವಿವರಗಳು | ಓವರ್ ಹೆಡ್ | ಯು.ಜಿ | ಎ.ಬಿ. ಕೇಬಲ್ | ಒಟ್ಟು |
|---|---|---|---|---|---|---|---|
| ಉ) | ಜಯನಗರ | ಎಸ್-18, ಚಿಕ್ಕ ಕಲ್ಲಸಂದ್ರ | ಹೆಚ್ ಟಿ (rkm) | 0.00 | 102.49 | 0.00 | **102.49** |
| | | | ಎಲ್ ಟಿ (rkm) | 8.00 | 3.20 | 85.06 | **96.26** |